**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.7155/2022**

**ಸಿ.ಡಬ್ಲ್ಯೂ-06**

**ಪಿ.ಡಬ್ಲ್ಯೂ-05**

| | |
|---|---|
| ಸಾಕ್ಷಿಯ ಹೆಸರು | : ಮಾಯಕ್ಕ ಪೂಜಾರಿ |
| ತಂದೆ/ಗಂಡನ ಹೆಸರು | : ಲಕ್ಷ್ಮಣ |
| ವಯಸ್ಸು | : 30 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸಸ್ಥಳ | : ನಂದರಗಿ |

**ದಿನಾಂಕ:30-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ಚಾಸಾ 1, 4 ರಿಂದ 6 ರವರ ಪರಿಚಯ ಇರುತ್ತದೆ. ಈಗ್ಗೆ 4 ವರ್ಷಗಳ ಹಿಂದೆ ಚಾಸಾ 1 ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ. ಬೆಳಿಗ್ಗೆ 9 ರಿಂದ 9.30 ರ ಸುಮಾರಿಗೆ ನಾನು ಮನೆಯ ಒಳಗಡೆ ಕೆಲಸ ಮಾಡುತ್ತಿದ್ದಾಗ ಹಿಂದಾಗಡೆ ಗಲಾಟೆಯಾದಾಗ ನಾನು ಮನೆಯಿಂದ ಹೊರಗೆ ಬಂದಿರುತ್ತೇನೆ. ನಾನು ಅಲ್ಲಿಗೆ ಹೋಗಿ ನೋಡಲಾಗಿ ಚಾಸಾ 1 ರವರು ಕೆಳಗಡೆ ಬಿದ್ದು ಒದ್ದಾಡುತ್ತಿದ್ದರು. ಸದರಿ ಚಾಸಾ 1 ರವರಿಗೆ ಕೈ ಮುರಿದಿತ್ತು, ಕಾಲಿನ ಚಕ್ಕಡಿ ಮುರಿದಿತ್ತು ಆಗ ನಾನು ಚಾಸಾ 1 ರವರನ್ನು ಜಗಳದ ಬಗ್ಗೆ ವಿಚಾರಿಸಲು ಅವರು ನಾನು ಇಬ್ಬರು ಮೊಮ್ಮಕ್ಕಳನ್ನು ಕರೆದುಕೊಂಡು ಮನೆಯ ಮುಂದಿನ ಬಾಗಿಲಿನಲ್ಲಿ ಕುಳಿತು ಊಟ ಮಾಡುತ್ತಿದ್ದಾಗ 1 ನೇ ಆರೋಪಿಗೆ ಮುಸುರೆ ನೀರನ್ನು ಯಾಕೆ ಚೆಲ್ಲುತ್ತಿಯಾ ಎಂದು ಕೇಳಿದಾಗ ಆಕೆಯು ಬಂದು ಅವಾಚ್ಯ ಶಬ್ದಗಳಿಂದ ಬೈದು ಜಾಗ ನಿನ್ನದು ಇರುತ್ತದಾ ಅಂದಾಗ ನಾನು ಜಾಗ ನನ್ನದು ಇರುತ್ತದು ಎಂದು ಹೇಳಿದಾಗ ಕಬ್ಬಿಣದ ಬುಟ್ಟಿ ಮತ್ತು ಚಪ್ಪಲಿಯಿಂದ ಆರೋಪಿತರು ಹೊಡೆದಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ಹೊಡೆದ ಪರಿಣಾಮ ಚಾಸಾ 1 ರವರಿಗೆ ಕಾಲಿನ ಚಕ್ಕಡಿ ಮತ್ತು ಕೈ ಮುರಿದಿತ್ತು. ಆಗ ಚಾಸಾ 4 ರವರು ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆರೋಪಿತರು ಚಾಸಾ 1 ಮತ್ತು 4 ರವರಿಗೆ ಜೀವಬೆದರಿಕೆ ಹಾಕಿರುತ್ತಾರೆ. 1 ರಿಂದ 3 ನೇ ಆರೋಪಿತರು ತನಗೆ ಹೊಡೆದಿರುತ್ತಾರೆ ಎಂದು ಚಾಸಾ 1 ರವರು ತಿಳಿಸಿರುತ್ತಾರೆ. 2 ನೇ

-2-

ಆರೋಪಿ ಕೈ ಹಿಡಿದು ಎಳೆದಾಡಿ, 1 ನೇ ಆರೋಪಿಯು ನೂಕಿರುತ್ತಾಳೆ ಎಂದು ಹಾಗೂ 3 ನೇ ಆರೋಪಿಯು ಹೊಡೆದಿರುತ್ತಾಳೆ ಎಂದು ಚಾಸಾ 1 ರವರು ತಿಳಿಸಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಮು.ಮಾ.1 ಮತ್ತು 2 ನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಎನ್.ಬಿ.ವಕೀಲರಿಂದಃ**

ಚಾಸಾ 1 ರವರ ಗಂಡನ ಹೆಸರು ಸಿದ್ದಪ್ಪ. ಸದರಿ ಸಿದ್ದಪ್ಪ ಇವರು 3 ಜನ ಸಹೋದರರು ಅವರು ಚಂದ್ರಾಮ, ಭೀರಪ್ಪ ಮತ್ತು ಸಿದ್ದಪ್ಪ ಇರುತ್ತಾರೆ. ಸದರಿ ಭೀರಪ್ಪ ಇವರು 2 ನೇ ಆರೋಪಿಯ ತಂದೆ ಎಂದರೆ ಸರಿ. 3 ನೇ ಆರೋಪಿಯು ಸಿದ್ದಪ್ಪ ಇವರ ತಮ್ಮ ಆದರೆ ಮಕ್ಕಳಿಲ್ಲ. ನಮ್ಮ ಮನೆ ಮತ್ತು ಚಾಸಾ 1 ರವರ ಮನೆ ದೂರ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ 1 ರವರ ಮನೆ ಮತ್ತು ನಮ್ಮ ಮನೆ ಮಗ್ಗುಮಗ್ಗಲಿಗೆ ಇರುತ್ತದೆ. ಜಗಳವು 09.30 ಗಂಟೆಗೆ ಆಗಿರುತ್ತದೆ. ನಾನು ಸ್ಥಳಕ್ಕೆ ಹೋದಾಗ 10 ಗಂಟೆಯಾಗಿತ್ತು. ಬುಟ್ಟಿಯಲ್ಲಿ ಮತ್ತು ಚಪ್ಪಲಿಯಲ್ಲಿ ಹೊಡೆದಿರುವುದನ್ನು ನಾನು ನೋಡಿಲ್ಲ. ಜಗಳದ ಕಾರಣ ನಿಮಗೆ ಗೊತ್ತಿಲ್ಲಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹಾದಿಯ ಸಲುವಾಗಿ ಆರೋಪಿತರು ಹಾಗೂ ಚಾಸಾ 1 ರವರ ನಡುವೆ ಮೊದಲಿನಿಂದಲೂ ತಂಟೆ ನಡೆದಿತ್ತು ಎಂದು ನುಡಿಯುತ್ತಾರೆ. ಹಾದಿಯ ಸಲುವಾಗಿ ಈ ಮುಂಚೆ ತಂಟೆ ತಕರಾರು ಆದ ಬಗ್ಗೆ ಯಾವುದೇ ದೂರು ದಾಖಲಾಗಿಲ್ಲ. ಚಾಸಾ 4 ರವರು ಚಾಸಾ 1 ರವರ ಮಗಳು. ಸದರಿ ಚಾಸಾ 4 ರವರು ನಂದರಗಿಯಲ್ಲಿ ಚಾಸಾ 1 ರವರ ಮನೆಯಲ್ಲಿ ಇರುತ್ತಾರೆ. ಚಾಸಾ 1 ಮತ್ತು ನಾನು ಜೊತೆಯಲ್ಲಿ ಕೆಲಸಕ್ಕೆ ಹೋಗುತ್ತೇವೆ ಎಂದರೆ ಸರಿ. ನಾನು ಜಗಳದ ಸಪ್ಪಳವನ್ನು ಕೇಳಿ ಓಡಿ ಹೋಗಿ ನೋಡಿದಾಗ ಅಲ್ಲಿ ಚಾಸಾ 1 ರವರು ಕೆಳಗೆ ಬಿದ್ದಿದ್ದು ಅವರಿಗೆ ಜಗಳದ ಬಗ್ಗೆ ಕೇಳಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಬುಟ್ಟಿಯಿಂದ ಮತ್ತು ಚಪ್ಪಲಿಯಿಂದ ಹೊಡೆದಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಂದ್ರಾಮ ಇವರಿಗೆ 3 ಎಕರೆ ಆಸ್ತಿ ಮತ್ತು ಸಿದ್ದಪ್ಪ ಇವರಿಗೆ 10 ಎಕರೆ ಆಸ್ತಿ ಇರುತ್ತದೆ. 3 ನೇ ಆರೋಪಿಯು 2 ನೇ ಆರೋಪಿಗೆ ಆಸ್ತಿಯನ್ನು ಕೊಡುತ್ತೇನೆ ಎಂದು ಹೇಳಿದಾಗ ಚಾಸಾ 1 ರವರು ಜಗಳ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಆರೋಪಿ ಮತ್ತು ಚಾಸಾ 1 ರವರಿಗೆ ಮನಸಾಮನಸಾ ಸರಿ ಇಲ್ಲವೆಂದರೆ ಸರಿಯಲ್ಲ. ಚಾಸಾ 1 ರವರು ನೀಡಿರುವ ಸುಳ್ಳು ದೂರಿಗೆ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಜಗಳ ಆಗದೇ ಇದ್ದರು ಸಹ 3 ನೇ ಆರೋಪಿಯು 2 ನೇ ಆರೋಪಿಯ ಹೆಸರಿನಲ್ಲಿ ಆಸ್ತಿ



ಮಾಡುತ್ತಾನೆ ಎನ್ನುವ ದುರುದ್ದೇಶದಿಂದ ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ. ಸರಿ ಇದೆ

ಸಹಿ/-

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**